# ಕರ್ನಾಟಕ ವಿಧಾನ ಪರಿಷತ್ತು

CL

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 302(346)
ಸದಸ್ಯರ ಹೆಸರು : ಶ್ರೀ ಟಿ.ಎ.ಶರವಣ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 07-07-2023
ಉತ್ತರಿಸುವ ಸಚಿವರು : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪ್ರಸ್ತುತ ರಾಜ್ಯ ಸರ್ಕಾರದ ಸಾಂಸ್ಕೃತಿಕ ನೀತಿ ಏನಿದೆ; ಸಾಂಸ್ಕೃತಿಕ ನೀತಿ ನಿರೂಪಣೆಗೆ ಸಮಿತಿಯನ್ನು ಯಾವಾಗ ರಚಿಸಲಾಗಿತ್ತು ಮತ್ತು ಇದರ ಪ್ರಮುಖ ಶಿಫಾರಸ್ಸುಗಳಾವುವು; ಜಾರಿಯಾದ ಮತ್ತು ಜಾರಿಯಾಗದ ಶಿಫಾರಸ್ಸುಗಳು ಯಾವುವು; ಜಾರಿ ಮಾಡದಿರಲು ಕಾರಣಗಳೇನು? (ವಿವರ ನೀಡುವುದು) | ರಾಜ್ಯದಲ್ಲಿ ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ರಾಜ್ಯದ ಸಾಂಸ್ಕೃತಿಕ ಕ್ಷೇತ್ರದ ಒಳಿತಿಗಾಗಿ ಸಾಂಸ್ಕೃತಿಕ ನೀತಿಯನ್ನು ರೂಪಿಸಲಾಗುತ್ತಿದೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಜಾಸತ್ತಾತ್ಮಕತೆಯೇ ಸಾಂಸ್ಕೃತಿಕ ನೀತಿಯ ಕೇಂದ್ರ ಪ್ರಜ್ಞೆಯಾಗಿರುತ್ತದೆ. ಅಂದರೆ ಸಾಮಾಜಿಕ - ಸಾಂಸ್ಕೃತಿಕ ನ್ಯಾಯತ್ತತೆ ಮತ್ತು ಸಮಾನತೆಯ ನೀತಿ ಮುಖ್ಯವಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 560 ಕಸಧ 2013, ದಿನಾಂಕ:08.08.2013ರಲ್ಲಿ ಪ್ರೊ.ಬರಗೂರು ರಾಮಚಂದ್ರಪ್ಪ ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದ್ದು, ಸಮಿತಿಯ ಪ್ರಮುಖ ಶಿಫಾರಸ್ಸುಗಳು ಈ ಕೆಳಕಂಡಂತಿದೆ.<br><br>1. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಬಲೀಕರಣ ಮತ್ತು ಆಡಳಿತ ವಿಕೇಂದ್ರಿಕರಣ<br>2. ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆ<br>3. ಪ್ರಶಸ್ತಿಗಳ ವಿತರಣೆ ಕಾಲಬದ್ಧತೆ ಮತ್ತು ಏಕರೂಪತೆ<br>4. ಸಾಹಿತಿ ಕಲಾವಿದರಿಗೆ ಮಾಸಾಶನ<br>5. ಇಲಾಖೆಯ ಅಡಿಯಲ್ಲಿ ರಚಿತವಾಗಿರುವ ಅಕಾಡೆಮಿಗಳು ಮತ್ತು ಪ್ರಾಧಿಕಾರಗಳ ಸಬಲೀಕರಣ ಮುಂತಾದವು ಅನುಬಂಧ-1 ರಲ್ಲಿರಿಸಿದೆ.<br><br>ಸರ್ಕಾರದ ಆದೇಶ ಸಂಖ್ಯೆ:ಕಸಂವಾ 560 ಕಸಧ 2013, ದಿನಾಂಕ:10-10-2017ರಲ್ಲಿ ಸಾಂಸ್ಕೃತಿಕ ನೀತಿ ಜಾರಿಗೊಳಿಸುವ ಕುರಿತು ಸಚಿವ ಸಂಪುಟ ಉಪ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಪ್ರಸ್ತಾವನೆ ಸಲ್ಲಿಸಲು ಆದೇಶಿಸಲಾಗಿದ್ದು, ಸದರಿ ಆದೇಶದನ್ವಯ ವಿಭಾಗ ಮಟ್ಟದಲ್ಲಿ ಜಂಟಿ ನಿರ್ದೇಶಕರ ಕಛೇರಿಗಳನ್ನು ಪ್ರಾರಂಭಿಸಲಾಗಿದೆ.<br><br>ಸಾಂಸ್ಕೃತಿಕ ನೀತಿಯ ಪೂರ್ಣ ಅನುಷ್ಠಾನ ಸಾಧ್ಯವಾಗಿರದ ಅಂಶ ಹಾಗೂ ಇಂದಿನ ಕಾಲಘಟ್ಟಕ್ಕೆ ಅನುಗುಣವಾದ ಸಾಂಸ್ಕೃತಿಕ ನೀತಿಯನ್ನು ರೂಪಿಸಲು ಸರ್ಕಾರದ ಆದೇಶ ಸಂಖ್ಯೆ:ಕಸಂವಾ 70 ಕಸಧ 2021, ದಿನಾಂಕ:16.04.2022ರಲ್ಲಿ ಶ್ರೀ ಮಲ್ಲೇಪುರಂ ಜಿ.ವೆಂಕಟೇಶ್, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ವರದಿ ಸಲ್ಲಿಸಿರುವುದಿಲ್ಲ. |
| (ಆ) | ಸಾಂಸ್ಕೃತಿಕ ನೀತಿ ಕೇಂದ್ರಗಳಿಗೆ ಸದಸ್ಯರು ಮತ್ತು ಅಧ್ಯಕ್ಷರ ನೇಮಕಾತಿಗೆ ಇರುವ ಮಾನದಂಡಗಳು ಯಾವುವು; ಮತ್ತು ಅವರ ಅವಧಿ ಎಷ್ಟು; (ಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 560 ಕಸಧ 2013, ದಿನಾಂಕ:08.08.2013ರಲ್ಲಿ ಪ್ರೊ.ಬರಗೂರು ರಾಮಚಂದ್ರಪ್ಪ ಇವರ ಅಧ್ಯಕ್ಷತೆಯಲ್ಲಿ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಕಸಂವಾ 70 ಕಸಧ 2021, ದಿನಾಂಕ:16.04.2022ರಲ್ಲಿ ಶ್ರೀ ಮಲ್ಲೇಪುರಂ ಜಿ.ವೆಂಕಟೇಶ್, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ, ಸಮಿತಿಯನ್ನು ರಚಿಸಲಾಗಿದ್ದು, ಸದರಿ ಆದೇಶದಲ್ಲಿ ಅಧ್ಯಕ್ಷರು ಹಾಗೂ ಸದಸ್ಯರ ಅವಧಿಯನ್ನು ನಿಗದಿಪಡಿಸಿರುವುದಿಲ್ಲ. (ಆದೇಶದ ಪ್ರತಿಗಳನ್ನು ಅನುಬಂಧ-2 ರಲ್ಲಿರಿಸಿದೆ. |

| | | |
|---|---|---|
| (ಇ) | ಸರ್ಕಾರ ಬದಲಾದಂತೆ ಸಾಂಸ್ಕೃತಿಕ ಕೇಂದ್ರಗಳ ಕಾರ್ಯಕಾರಿ ಮಂಡಳಿ ಮತ್ತು ನೀತಿ ಬದಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ, ಇದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? | ಸರ್ಕಾರದ ಆದೇಶ ಸಂಖ್ಯೆ:ಕಸಂಪಾಪ್ರ 560 ಕಸಧ 2013, ದಿನಾಂಕ:08.08.2013ರಲ್ಲಿ ಮೊದಲಿಗೆ ಪ್ರೊ.ಬರಗೂರು ರಾಮಚಂದ್ರಪ್ಪ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ನಂತರ ಸಾಂಸ್ಕೃತಿಕ ನೀತಿಯ ಪೂರ್ಣ ಅನುಷ್ಠಾನ ಸಾಧ್ಯವಾಗಿರದ ಅಂಶ ಹಾಗೂ ಇಂದಿನ ಕಾಲಘಟ್ಟಕ್ಕೆ ಅನುಗುಣವಾದ ಸಾಂಸ್ಕೃತಿಕ ನೀತಿಯನ್ನು ರೂಪಿಸಲು ಸರ್ಕಾರದ ಆದೇಶ ಸಂಖ್ಯೆ:ಕಸಂವಾ 70 ಕಸಧ 2021, ದಿನಾಂಕ:16.04.2022ರಲ್ಲಿ ಶ್ರೀ ಮಲ್ಲೇಪುರಂ ಜಿ.ವೆಂಕಟೇಶ್, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. |

ಸಂಖ್ಯೆ: ಕಸಂವಾ 24 ಕವಿಸ 2023

(ಶಿವರಾಜ್ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಅನುಬಂಧ-1

| ಕ್ರ. ಸಂ. | ಸಾಂಸ್ಕೃತಿಕ ನೀತಿ ಸಮಿತಿಯ ಶಿಫಾರಸ್ಸುಗಳು | ಅನುಷ್ಠಾನದ ಬಗ್ಗೆ ಕೈಗೊಂಡ ಕ್ರಮ |
|---|---|---|
| 1 | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಬಲೀಕರಣ ಮತ್ತು ಆಡಳಿತ ವಿಕೇಂದ್ರಿಕರಣ | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಬಲೀಕರಣ ಮತ್ತು ಆಡಳಿತ ವಿಕೇಂದ್ರಿಕರಣಕ್ಕೆ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. 04 ಕಂದಾಯ ವಿಭಾಗಗಳಿಗೆ ಕೇಂದ್ರ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 4 ಜಂಟಿ ನಿರ್ದೇಶಕರನ್ನು ಸರ್ಕಾರದ ಆದೇಶ ಸಂಖ್ಯೆ:ಕಸಂವಾ:53:ಕಸನಿ:ಆಕ:2021, ದಿನಾಂಕ:16.09.2021 ಹಾಗೂ ತಿದ್ದುಪಡಿ ಆದೇಶ ಸಂಖ್ಯೆ: ಕಸಂವಾ:53:ಕಸನಿ:ಆಕ:2021, ದಿನಾಂಕ:21.09.2021ರ ಆದೇಶದಲ್ಲಿ ಸ್ಥಳಾಂತರಿಸಿ ಆದೇಶಿಸಲಾಗಿದ್ದು, ಇಲಾಖೆಯ ಅಧಿಕೃತ ಜ್ಞಾಪನ ಸಂಖ್ಯೆ:ಡಿಕೆಸಿ:36011/94/2021, ದಿನಾಂಕ:21.09.2021ರಲ್ಲಿ 4 ಕಂದಾಯ ವಿಭಾಗಗಳಿಗೆ ಕೇಂದ್ರ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 4 ಜಂಟಿ ನಿರ್ದೇಶಕರನ್ನು ಸ್ಥಳಾಂತರಿಸಿ ಚಾಲನಾ ಆದೇಶ ಹೊರಡಿಸಲಾಗಿದ್ದು, ವಲಯ ಜಂಟಿ ನಿರ್ದೇಶಕರು 04 ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.<br>2. ವಿಭಾಗ ಮಟ್ಟದ ಕಚೇರಿಗಳಲ್ಲಿ ಹುದ್ದೆಗಳನ್ನು ಸೃಜಿಸಲು ಹಾಗೂ ಸ್ಥಳಾಂತರಿಸಲು ಒಟ್ಟು 44 ಹುದ್ದೆಗಳಲ್ಲಿ 22 ಹುದ್ದೆಗಳು ಸ್ಥಳಾಂತರಿಸಲು, 6 ಹುದ್ದೆಗಳನ್ನು ಸೃಜನೆ ಮಾಡಲು ಮತ್ತು 16 ಹುದ್ದೆಗಳನ್ನು ಹೊರಗುತ್ತಿಗೆ ಮೇಲೆ ಸೇವೆ ಪಡೆಯಲು ಪರಿಶೀಲಿಸಲಾಗುತ್ತಿದೆ.<br>3. ಜಿಲ್ಲಾ ಮಟ್ಟದ ಕಚೇರಿಗಳಲ್ಲಿ ಅಧೀಕ್ಷರು, ಪ್ರ.ದ.ಸ. ಸೌಂಡ್ ಇಂಜಿನೀಯರ್, ದ್ವಿ.ದ.ಸ/ಕಂಪ್ಯೂಟರ್ ಆಪರೇಟರ್, ಕ್ಲೀನರ್ ಮತ್ತು ದಲಾಯತ್ ಸೇರಿ ಒಟ್ಟು 124 ಹುದ್ದೆಗಳನ್ನು ಸೃಜನೆ ಮಾಡುವ ಕುರಿತು ಪರಿಶೀಲಿಸಲಾಗುತ್ತಿದೆ.<br>4. ಕೇಂದ್ರ ಕಚೇರಿಯಲ್ಲಿ ಅಪರ ನಿರ್ದೇಶಕರು, ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಸೇರಿ 6 ಹುದ್ದೆಗಳನ್ನು ಸೃಜನೆ ಮಾಡುವ ಕುರಿತು ಪರಿಶೀಲಿಸಲಾಗುತ್ತಿದೆ. |
| 2 | ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆ | ಜಿಲ್ಲಾ ಕೇಂದ್ರಗಳಿಗೆ ಪ್ರಾಚ್ಯವಸ್ತು ಪಾಲಕರು, ಪ್ರದಸ, ಕಂಪ್ಯೂಟರ್ ಆಪರೇಟರ್, ದಲಾಯತ್ ಹುದ್ದೆಗಳನ್ನು ಸೃಜನೆ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| 3 | ಪ್ರಶಸ್ತಿಗಳ ವಿತರಣೆ ಕಾಲಬದ್ಧತೆ ಮತ್ತು ಏಕರೂಪತೆ | ವಿವಿಧ ಕ್ಷೇತ್ರಗಳಲ್ಲಿ ಸಾಧಕರಿಗೆ ಕೊಡುವ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಗಳನ್ನು ನೀಡಲು ಆಯ್ಕೆ ಸಮಿತಿ ರಚಿಸಿ ಸಭೆಗಳನ್ನು ನಡೆಸಿ ಆಯಾ ವರ್ಷಗಳಲ್ಲಿಯೇ ಪ್ರಶಸ್ತಿ ವಿತರಣೆ ಮಾಡಲು ಪ್ರಾಧಾನ್ಯತೆ ನೀಡಲಾಗುತ್ತಿದೆ. ಇಲಾಖೆಯಿಂದ ನೀಡುವ 4 ರಾಷ್ಟ್ರ ಮಟ್ಟದ ಪ್ರಶಸ್ತಿಗಳಿಗೆ ರೂ.10.00 ಲಕ್ಷ ಹಾಗೂ ರಾಜ್ಯ ಮಟ್ಟದ 18 ಪ್ರಶಸ್ತಿಗಳಿಗೆ ರೂ.5.00 ಲಕ್ಷಗಳನ್ನು ಏಕರೂಪವಾಗಿ ನಿಗದಿಪಡಿಸಿ ಆದೇಶಿಸಲಾಗಿರುತ್ತದೆ. |
| 4 | ಸಾಹಿತಿ ಕಲಾವಿದರಿಗೆ ಮಾಸಾಶನ | ಸಾಹಿತಿ ಕಲಾವಿದರಿಗೆ ಮಾಸಾಶನವನ್ನು ಪ್ರತಿ ಮಾಹೆ ರೂ.1500/- ಗಳಿಂದ ರೂ.2000/-ಗಳಿಗೆ ಹೆಚ್ಚಿಸಿ, ನವೆಂಬರ್ 2019 ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ. |
| 5 | ಇಲಾಖೆಯ ಅಡಿಯಲ್ಲಿ ರಚಿತವಾಗಿರುವ ಅಕಾಡೆಮಿಗಳು ಮತ್ತು ಪ್ರಾಧಿಕಾರಗಳ ಸಬಲೀಕರಣ | ಅಕಾಡೆಮಿಗಳ ಅಧ್ಯಕ್ಷರು/ಸದಸ್ಯರನ್ನು ನೇಮಕಾತಿ ಮಾಡುವಾಗ ಸಾಮಾಜಿಕ ನ್ಯಾಯ, ಲಿಂಗಾಧಾರಿತ ಪ್ರಾತಿನಿಧ್ಯ, ಪ್ರಾದೇಶಿಕ ನ್ಯಾಯಗಳಿಗೆ ಚ್ಯುತಿ ಬಾರದಂತೆ ಯುವ ಪ್ರತಿಭೆಗಳಿಗೂ ಹಾಗೂ ಎಲ್ಲಾ ವರ್ಗದ ವಿಷಯ ಕ್ಷೇತ್ರ ಪರಿಣಿತರಿಗೆ ಅವಕಾಶ ಕಲ್ಪಿಸಲಾಗಿದ್ದು, ವಿವಿಧ ಅಕಾಡೆಮಿಗಳ ನಡುವೆ ಸಮನ್ವಯ ಸಾಧಿಸಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸೌಹಾರ್ದ ವೃದ್ಧಿಸುವ ನಿಟ್ಟಿನಲ್ಲಿ ಕ್ರಮವಹಿಸಿ ಆಯಾ ಅಕಾಡೆಮಿಗಳ ಕಾರ್ಯಯೋಜನೆಗಳನ್ನು ಪರಿಗಣಿಸಿ ಅನುದಾನವನ್ನು ನೀಡಲಾಗುತ್ತಿದೆ. ಅಕಾಡೆಮಿಗಳು ಆಯಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಪುಸ್ತಕಗಳ ಪ್ರಕಟಣೆ, ಕಮ್ಮಟ-ಕಾರ್ಯಾಗಾರಗಳು, ತರಬೇತಿ ಶಿಬಿರಗಳನ್ನು ನಡೆಸುತ್ತಿವೆ. |
| 6 | ಅಕಾಡೆಮಿಗಳ ವಿಭಾಗೀಕರಣ ಮತ್ತು ಹೆಸರು ಬದಲಾವಣೆ | ಕರ್ನಾಟಕ ಯಕ್ಷಗಾನ ಮತ್ತು ಬಯಲಾಟ ಅಕಾಡೆಮಿಯನ್ನು ಪ್ರತ್ಯೇಕ ಪ್ರದೇಶಗಳಲ್ಲಿ ಅತ್ಯಂತ ವ್ಯಾಪಕವಾಗಿ ಮತ್ತು ಜನಪ್ರಿಯ ಕಲಾ ಪ್ರಕಾರವಾಗಿ ರೂಪುಗೊಳಿಸಿದ್ದು, ಕರ್ನಾಟಕ ಯಕ್ಷಗಾನ ಅಕಾಡೆಮಿಯಿಂದ ದೊಡ್ಡಾಟ, ಸಣ್ಣಾಟ, ಕೃಷ್ಣ ಪಾರಿಜಾತ ಹಾಗೂ ಬಯಲಾಟ ಪ್ರಕಾರಗಳನ್ನು ಪೋಷಿಸುವ ಸಲುವಾಗಿ ಪ್ರತ್ಯೇಕವಾಗಿ ಬಯಲಾಟ ಅಕಾಡೆಮಿಯನ್ನು ರಚಿಸಲಾಗಿದೆ. |
| 7 | ಸಾಂಸ್ಕೃತಿಕ ಸಂಸ್ಥೆಗಳಿಗೆ ಧನಸಹಾಯ ಮಜೂರಾತಿ - ತಜ್ಞರ ಸಮಿತಿ ರಚನೆ: | ಸಾಂಸ್ಕೃತಿಕ ಸಂಘಟನೆಗಳನ್ನು ಬಲಪಡಿಸಲು ಅರ್ಜಿಗಳನ್ನು ಆಹ್ವಾನಿಸಿ, ಕಾಲಬದ್ಧವಾಗಿ ಅವುಗಳನ್ನು ಪರಿಶೀಲಿಸಲು ತಜ್ಞರ ಸಮಿತಿಯನ್ನು ರಚಿಸಿಕೊಂಡು ಸಮಿತಿಯ ಶಿಫಾರಸ್ಸಿನ ಮೇರೆಗೆ ಧನಸಹಾಯವನ್ನು ಮಂಜೂರು ಮಾಡಲಾಗುತ್ತಿದೆ. ಈ ಸಾಂಸ್ಕೃತಿಕ ಸಂಸ್ಥೆಗಳ ಕಾರ್ಯ ಅಧ್ಯಯನ ಕೈಗೊಳ್ಳಲು ಸಾಮಾಜಿಕ ತಪಾಸಣೆ ಮಾಡಲಾಗುತ್ತಿದ್ದು, ಮಂಜೂರಾದ ಫಲಾನುಭವಿ ಸಂಸ್ಥೆಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತಿದೆ. |

..2...

| | | |
|---|---|---|
| 8 | ಸ್ಕಾಲರ್‌ಶಿಪ್ ಮತ್ತು ಫೆಲೋಶಿಪ್ ನೀಡುವ ಕುರಿತು | ವಿವಿಧ ಕ್ಷೇತ್ರಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಮತ್ತು ಸಂಶೋಧನೆಯಲ್ಲಿ ತೊಡಗಿರುವ ತಜ್ಞರಿಗೆ ಫೆಲೋಶಿಪ್ ನೀಡುವ ಯೋಜನೆಗಳನ್ನು ಆಯಾ ಅಕಾಡೆಮಿಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ. |
| 9 | ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಮತ್ತು ಸಂಶೋಧನೆಗೆ ಒತ್ತು | ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಮತ್ತು ಸಂಶೋಧನ ಕೇಂದ್ರವನ್ನು ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ಸ್ಥಾಪಿಸಲಾಗಿದ್ದು, ಈ ಕೇಂದ್ರವು ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಸಂಶೋಧನ ಮತ್ತು ಭವಿಷ್ಯದ ನೆಲೆಗಳನ್ನು ರೂಪಿಸುವ ಕಾರ್ಯ ನಿರ್ವಹಿಸುತ್ತಿದೆ. |
| 10 | ಗಡಿನಾಡು ಪ್ರಾಧಿಕಾರದ ವ್ಯಾಪ್ತಿಗೆ ಹೊರನಾಡು | ಗಡಿ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ರಾಜ್ಯದ ಗಡಿ ಹಂಚಿಕೊಂಡಿರುವ 58 ತಾಲ್ಲೂಕುಗಳನ್ನು ಗುರುತಿಸಲಾಗಿದ್ದು, ಹೊರರಾಜ್ಯಗಳಲ್ಲಿಯೂ ಕನ್ನಡ ಭಾಷಿಕರಿರುವ ಸ್ಥಳಗಳಿದ್ದು, ಹೊರನಾಡು ಮತ್ತು ಗಡಿನಾಡು ಪ್ರದೇಶಗಳಲ್ಲಿ ಕನ್ನಡಿಗರ ಸಾಂಸ್ಕೃತಿಕ ಅಗತ್ಯಗಳನ್ನು ಒದಗಿಸಿಕೊಡಲು ಹಾಗೂ ಸಮಾನ ಅವಕಾಶಗಳನ್ನು ಕಲ್ಪಿಸಲು ಯೋಜನೆಯನ್ನು ರೂಪಿಸಲು ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಕೋರಲಾಗಿದೆ. . |
| 11 | ಅನ್ವಯಿಕ ಕನ್ನಡ ತಂತ್ರಾಂಶಗಳ ಅಭಿವೃದ್ಧಿ ಮತ್ತು ಆಧುನಿಕ ತಂತ್ರಜ್ಞಾನ ಮಾಧ್ಯಮ ಸದ್ಬಳಕೆ | ಕನ್ನಡ ಭಾಷೆಯನ್ನು ನಾಡಿನ ಸಾಹಿತ್ಯ ಸಂಸ್ಕೃತಿ, ಇತಿಹಾಸ ಪರಂಪರೆಗಳ ಹಾಗೂ ಇತರೆ ಕಲೆಗಳನ್ನು ಆಧುನಿಕ ತಂತ್ರಜ್ಞಾನದ ಮೂಲಕ ಸಾರ್ವಜನಿಕರಿಗೆ ತಲುಪಿಸಲು ಕಣಜ ವಿಭಾಗದಿಂದ ಕ್ರಮ ಕೈಗೊಳ್ಳಲಾಗುತ್ತಿದೆ. ಕಣಜ ಯೋಜನೆಯ ಕಾರ್ಯವನ್ನು ಇನ್ನಷ್ಟು ವ್ಯವಸ್ಥಿತಗೊಳಿಸುವ ಉದ್ದೇಶದಿಂದ ಸರ್ಕಾರದ ಆದೇಶ ಸಂಖ್ಯೆ:ಕಸಂವಾ 97 ಕಸನಿ 2022, ದಿನಾಂಕ:10.03.2022ರಲ್ಲಿ ಮೇಲ್ವಿಚಾರಣಾ ಸಮಿತಿಯನ್ನು ರಚಿಸಲಾಗಿರುತ್ತದೆ. |
| 12 | ರಂಗಮಂದಿರಗಳ ನಿರ್ಮಾಣ ಮತ್ತು ಏಕರೂಪ ನಿರ್ವಹಣೆ | 15 ಜಿಲ್ಲಾ ರಂಗಮಂದಿರಗಳ ನಿರ್ವಹಣೆಯನ್ನು ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇರುವ ನಿರ್ವಹಣಾ ಸಮಿತಿಯೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದು, ರಂಗಮಂದಿರವನ್ನು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಏಕರೂಪವಾಗಿ ರೂ.2000/-ಗಳ ಬಾಡಿಗೆ ನಿಗದಿ ಪಡಿಸಲಾಗಿದೆ.<br>ಸರ್ಕಾರದ ಆದೇಶ ಸಂಖ್ಯೆ:ಕಸಂವಾ 24 ಕಸಧ 2022. ದಿನಾಂಕ:22.02.2022ರಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ, ನಯನ ರಂಗಮಂದಿರ, ಸಂಸ ಬಯಲು ರಂಗಮಂದಿರ, ಆರ್ಟ್ ಗ್ಯಾಲರಿ, ಮಹಿಳಾ ವಿಶ್ರಾಂತಿ ಕೊಠಡಿ, ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಛಯ ಮತ್ತು ಕಲಾಗ್ರಾಮ ಬಯಲು ರಂಗಮಂದಿರ ಕಾಯ್ದಿರಿಸುವಿಕೆಯ ಪರಿಷ್ಕೃತ ಮಾರ್ಗಸೂಚಿ ಪ್ರಕಟಿಸಲಾಗಿರುತ್ತದೆ. |
| 13 | ರಂಗಾಯಣಗಳ ರಚನೆ ಮತ್ತು ನಿರ್ವಹಣೆ | ಸರ್ಕಾರದ ಆದೇಶ ಸಂಖ್ಯೆ:ಕಸಂವಾ 67 ಕಸನಿ ಆಕ 2021, ದಿನಾಂಕ:25.11.2021ರಲ್ಲಿ ಕರಾವಳಿ ಪ್ರದೇಶದ ಉಡುಪಿಯಲ್ಲಿ ಯಕ್ಷ ರಂಗಾಯಣವನ್ನು ಸ್ಥಾಪಿಸಲಾಗಿದೆ. ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ರಂಗಾಯಣವನ್ನು ಸ್ಥಾಪಿಸುವ ಕುರಿತು ಪರಿಶೀಲಿಸಲಾಗುತ್ತಿದೆ. |
| 14 | ಕಾಲೇಜು ರಂಗೋತ್ಸವ: | ಯುವಜನತೆ ಸಕ್ರಿಯವಾಗಿ ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಸುವ ಉದ್ದೇಶದಿಂದ ಜಿಲ್ಲೆ, ವಿಭಾಗ ಮತ್ತು ರಾಜ್ಯ ಹಂತಗಳಲ್ಲಿ ನಾಟಕೋತ್ಸವ ಮತ್ತು ಸ್ಪರ್ಧೆಗಳನ್ನು ರಾಜ್ಯದ ಎಲ್ಲಾ ರಂಗಾಯಣಗಳ ಮೂಲಕ ಆಯೋಜಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| 15 | ಉತ್ಸವಗಳಲ್ಲಿ ಸ್ಥಳೀಯರಿಗೆ ಆದ್ಯತೆ | ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆಯುವ ಜಿಲ್ಲಾಮಟ್ಟ, ರಾಜ್ಯಮಟ್ಟ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಉತ್ಸವಗಳಲ್ಲಿ ಆಯಾ ಜಿಲ್ಲಾ ಕಲಾವಿದರಿಗೆ ಶೇ 75% ರಷ್ಟು ಆದ್ಯತೆ ನೀಡಲು ಹಾಗೂ ಉಳಿದ 25% ರಷ್ಟು ರಾಜ್ಯ, ರಾಷ್ಟ್ರ ಮಟ್ಟದ ಕಲಾವಿದರಿಗೆ ಆದ್ಯತೆ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| 16 | ಜನಪದ ರೆಪರ್ಟರಿ ಸ್ಥಾಪನೆ | ನಾಡಿನ ಮೌಖಿಕ ಪರಂಪರೆಯ ಜಾನಪದ ಕಲಾವಿದರಿಗೆ ಅವಕಾಶ ಮತ್ತು ಸಂಭಾವನೆ ವಿಷಯದಲ್ಲಿ ತಿಳುವಳಿಕೆ ಕೊರತೆಯಿಂದ ಅನ್ಯಾಯಕ್ಕೊಳಗಾಗಿ ಸಂಭಾವನೆಯನ್ನು ಮಧ್ಯವರ್ತಿಗಳ ಹಾವಳಿ ಇಲ್ಲದೇ ನೇರವಾಗಿ ತಲುಪಿಸಲು ಹಾಗೂ ಪ್ರಾಚೀನ ಜನಪದ ಕಲೆಗಳ ತರಬೇತಿ ಮತ್ತು ಪ್ರೋತ್ಸಾಹ ನೀಡಲು 4 ವಿಭಾಗಗಳಲ್ಲಿ {ಚಾಮರಾಜನಗರ (ಮೈಸೂರು ವಿಭಾಗ), ರಾಮನಗರ (ಬೆಂಗಳೂರು ವಿಭಾಗ), ವಿಜಯಪುರ(ಬೆಳಗಾವಿ ವಿಭಾಗ), ಕೊಪ್ಪಳ (ಕಲಬುರಗಿ ವಿಭಾಗ)} ಜನಪದ ರೆಪರ್ಟರಿ ಸ್ಥಾಪನೆ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| 17 | ಪ್ರವಾಸಿ ಕೇಂದ್ರಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ | ರಾಜ್ಯದ ಪ್ರಮುಖ ಕೇಂದ್ರಗಳಿಗೆ ಭೇಟಿ ನೀಡುವ ಪ್ರವಾಸಿಗರಿಗೆ ನಾಡಿನ ಸಾಂಸ್ಕೃತಿಕ ಸಿರಿಯನ್ನು ಪರಿಚಯಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ ಕಲಾವಿದರಿಗೆ ವೇದಿಕೆ ಮತ್ತು ಆರ್ಥಿಕ ಅವಕಾಶಗಳನ್ನು ಒದಗಿಸುವ ಯೋಜನೆಯನ್ನು ರೂಪಿಸಲು ಪ್ರವಾಸೋದ್ಯಮ ಇಲಾಖೆಗೆ ಕೋರಲಾಗಿರುತ್ತದೆ. |

..3...

| | | |
|---|---|---|
| 18 | ಕಲಾಕೃತಿಗಳ ಮಾರಾಟ ಕೇಂದ್ರಗಳ ಸ್ಥಾಪನೆ ಮತ್ತು ಕಲಾಕೃತಿಗಳ ಪ್ರದರ್ಶನ | ರಾಜ್ಯ., ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಸ್ಥಳೀಯ ಕಲಾವಿದರ ಚಿತ್ರ ಕಲಾಕೃತಿಗಳನ್ನು ಮತ್ತು ಶಿಲ್ಪ ಕಲಾಕೃತಿಗಳನ್ನು ಮಾರಾಟಕ್ಕಾಗಿ ಕೇಂದ್ರವನ್ನು ಸ್ಥಾಪಿಸಲು ಅನುದಾನ ನೀಡುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ. |
| 19 | ಕರ್ನಾಟಕ ಕಲಾ ಗ್ರಾಮ | ವಿವಿಧ ಕಲಾ ಪ್ರಕಾರಗಳಲ್ಲಿ ತರಬೇತಿ ನೀಡುವ, ಪ್ರದರ್ಶನಕ್ಕೆ ವೇದಿಕೆ ಒದಗಿಸುವ, ಸಾಹಿತಿ ಕಲಾವಿದರ ಕಲಾ ಸೃಜನೆಗೆ ನೆಲೆಯಾಗಿ ವಸತಿ ಒದಗಿಸುವ ಕಾರ್ಯಗಾರ, ಕಮ್ಮಟಗಳಿಗೆ, ಹೀಗೆ ಕಲಾದರ್ಶನದ ಆಧುನಿಕ ವ್ಯವಸ್ಥೆಯುಳ್ಳ ಕಲಾಗ್ರಾಮದ ಸಮಗ್ರ ಯೋಜನೆಯನ್ನು ರೂಪಿಸಿ ಪ್ರತಿ ಜಿಲ್ಲೆಯಲ್ಲೂ ಒಂದು ಕಲಾಗ್ರಾಮವನ್ನು ಸ್ಥಾಪಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ಒಳಗೊಂಡಂತೆ ಸಮಿತಿ ರಚಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| 20 | ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪನೆ | ಬುಡಕಟ್ಟು ಜನಾಂಗಗಳು ಮತ್ತು ಸಂಸ್ಕೃತಿಗಳು ವಿಸ್ತಾರವಾಗಿದ್ದು, ಅವುಗಳ ಅಧ್ಯಯನ ಮತ್ತು ಸಂಶೋಧನೆಗೆ ಒಂದು ಪ್ರತ್ಯೇಕ ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪಿಸಲು ಕ್ರಮವಹಿಸುವಂತೆ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಿಗೆ ಕೋರಲಾಗಿರುತ್ತದೆ. |
| 21 | ಸೂಫಿ ಸಂಸ್ಕೃತಿ ಮತ್ತು ತತ್ವಪದ ಅಧ್ಯಯನ ಕೇಂದ್ರ ಸ್ಥಾಪನೆ | ತತ್ವಪದಕಾರರು ಮತ್ತು ಸೂಫಿಗಳ ಬದುಕು ಮತ್ತು ಸಂದೇಶಗಳನ್ನು ಅಧ್ಯಯನ ಮಾಡಿ ಅವುಗಳ ಸಂರಕ್ಷಣೆ ಮತ್ತು ಪ್ರಸಾರ ಹಾಗೂ ಪ್ರಚಾರಕ್ಕೆ ಅಗತ್ಯ ವ್ಯವಸ್ಥೆಗಳನ್ನು ರೂಪಿಸಲು ಅಧ್ಯಯನ ಕೇಂದ್ರ ಸ್ಥಾಪಿಸಲು ಉದ್ದೇಶಿಸಲಾಗಿರುತ್ತದೆ. |
| 22 | ಯುವಜನ ಸಂಸ್ಕೃತಿ ಶಿಬಿರ | ಯುವಜನರಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಸ್ಮಿತೆಯ ಬಗ್ಗೆ ಜಾಗೃತಿ ಮತ್ತು ಅಭಿಮಾನ ಮೂಡಿಸುವ ನಿಟ್ಟಿನಲ್ಲಿ ನಿರಂತರ ಚಟುವಟಿಕೆಗಳನ್ನು ಕೈಗೊಳ್ಳಲು ಸಂಸ್ಕೃತಿ ಶಿಬಿರಗಳನ್ನು ಆಯೋಜಿಸುವುದಕ್ಕಾಗಿ ರೂಪುರೇಷ ಸಿದ್ಧಪಡಿಸಿ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಮತ್ತು ನೆಹರು ಯುವಕ ಕೇಂದ್ರಗಳ ಮೂಲಕ ಯುವ ಸಂಸ್ಕೃತಿ ಶಿಬಿರಗಳನ್ನು ಏರ್ಪಡಿಸಲು ಉದ್ದೇಶಿಸಲಾಗಿರುತ್ತದೆ. |
| 23 | ತುಳು ಭಾಷೆಗೆ ಸಂವಿಧಾನದ 8ನೇಯ ಪರಿಚ್ಛೇದದಲ್ಲಿ ಸಂವಿಧಾನಿಕ ಮಾನ್ಯತೆ ಪಡೆಯಲು ಪ್ರಯತ್ನ | ತುಳು ಭಾಷೆಗೆ ಸಂವಿಧಾನದ 8ನೆಯ ಪರಿಚ್ಛೇದದಲ್ಲಿ ಸಂವಿಧಾನಿಕ ಮಾನ್ಯತೆ ಪಡೆಯುವ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಕೋರಲಾಗಿರುತ್ತದೆ. |
| 24 | ವಿವಿಧ ಟ್ರಸ್ಟ್/ ಪ್ರತಿಷ್ಠಾನಗಳ ಅವಧಿ ನಿಗದಿ | ವಿವಿಧ ಟ್ರಸ್ಟ್ ಮತ್ತು ಪ್ರತಿಷ್ಠಾನಗಳ ಅಧ್ಯಕ್ಷರು/ ಸದಸ್ಯರ ಅಧಿಕಾರವಧಿಯನ್ನು 3 ವರ್ಷಗಳವರೆಗೆ ನಿಗದಿ ಪಡಿಸಿ ಆದೇಶ ಹೊರಡಿಸಲಾಗಿರುತ್ತದೆ. |
| 25 | ಪ್ರಾಕೃತ ಮತ್ತು ಪಾಲಿ ಅಧ್ಯಯನ ಕೇಂದ್ರ ಸ್ಥಾಪನೆ | ಜೈನ ಮತ್ತು ಭೌದ್ಧ ಧರ್ಮಗ್ರಂಥಗಳು ಅಪಾರ ಪ್ರಮಾಣದಲ್ಲಿ ಲಭಿಸಿದ್ದು, ವಿಶ್ವವಿದ್ಯಾಲಯಗಳ ಮೂಲಕ ಅಧ್ಯಯನ ಮತ್ತು ಸಂಶೋಧನೆ ನಡೆಸಲು ಅನುಕೂಲವಾಗುವಂತೆ ಪ್ರಾಕೃತ ಮತ್ತು ಪಾಲಿ ಅಧ್ಯಯನ ಕೇಂದ್ರ ಸ್ಥಾಪಿಸಲು ಹಂಪಿ ಕನ್ನಡ ವಿಶ್ವವಿದ್ಯಾಲಯದ ಮೂಲಕ ಯೋಜನೆಯನ್ನು ರೂಪಿಸಲು ಉದ್ದೇಶಿಸಲಾಗಿರುತ್ತದೆ. |
| 26 | ಆರ್ಥಿಕ ಸಂಕಷ್ಟದಲ್ಲಿರುವ ಸಾಂಸ್ಕೃತಿಕ ವ್ಯಕ್ತಿಗಳಿಗೆ ಸಹಾಯ ಯೋಜನೆ | ಆರ್ಥಿಕ ಸಂಕಷ್ಟಕೊಳಗಾಗಿ ಕಷ್ಟಕರ ಜೀವನ ನಡೆಸುತ್ತಿರುವ ಕಲಾವಿದರಿಗೆ ಮತ್ತು ಅಪಘಾತಕ್ಕೊಳಗಾದ ಹಾಗೂ ಗಂಭೀರ ಸ್ವರೂಪ ಕಾಯಿಲೆಗೆ ಒಳಗಾದ ಸಾಹಿತಿ/ ಕಲಾವಿದರಿಗೆ ಕನಿಷ್ಠ ರೂ.10,000/- ದಿಂದ ಗರಿಷ್ಠ ರೂ.25,000/-ಗಳ ವರೆಗೆ ಸಹಾಯಧನ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| 27 | ಸಾಮಾಜಿಕ ತಪಾಸಣೆ: | ಇಲಾಖೆಯಿಂದ ಧನಸಹಾಯ ಪಡೆದಿರುವ ಸಂಸ್ಥೆಗಳ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿರುವ ಕುರಿತು ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರದ ಮೂಲಕ ತಪಾಸಣೆ ನಡೆಸಲಾಗುತ್ತಿದೆ. |

ಅನುಬಂಧ - ೨ (ಬಿ)

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದಲ್ಲಿ ಸಾಂಸ್ಕೃತಿಕ ನೀತಿ ಜಾರಿಗೊಳಿಸುವ ಬಗ್ಗೆ.
**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 560 ಕಸಧ 2013, ದಿನಾಂಕ: 08.08.2013.

**ಪ್ರಸ್ತಾವನೆ:-**

ಮೇಲೆ ಓದಲಾದ ಆದೇಶದಲ್ಲಿ ಕರ್ನಾಟಕದಲ್ಲಿ ಕನ್ನಡದ ನೆಲ-ಜಲ ಮತ್ತು ಸಂಸ್ಕೃತಿ ಎಲ್ಲವನ್ನು ಒಳಗೊಂಡ ಸಮಗ್ರ ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿ ಬೆಳೆಸಲು ಕನ್ನಡದ್ದೇ ಆದ ಒಂದು ಸಾಂಸ್ಕೃತಿಕ ನೀತಿ ಇರಬೇಕು ಎಂಬ ಉದ್ದೇಶದಿಂದ ಡಾ|| ಬರಗೂರು ರಾಮಚಂದ್ರಪ್ಪ ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಲಾಗಿತ್ತು. ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸದರಿ ವರದಿಯನ್ನು ಪರಿಶೀಲಿಸಲು ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿತ್ತು. ತದನಂತರ ಸದರಿ ಉಪ ಸಮಿತಿಯು ದಿನಾಂಕ: 05.05.2017ರಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಸಲ್ಲಿಸಿದ್ದು, ಸಾಂಸ್ಕೃತಿಕ ನೀತಿಯ ಪೂರ್ಣ ಅನುಷ್ಠಾನ ಸಾಧ್ಯವಾಗಿರುವುದಿಲ್ಲವೆಂಬ ಅಂಶವನ್ನು ಗಮನಿಸಲಾಗಿರುತ್ತದೆ.

ಪ್ರಸ್ತುತ ರಾಜ್ಯದಲ್ಲಿ ಒಂದು ಸಾಂಸ್ಕೃತಿಕ ನೀತಿ ಜಾರಿ ತರುವುದು ಅವಶ್ಯವಾಗಿದ್ದು, ಕನ್ನಡದ ಅಸ್ಮಿತೆ ಕಾಪಾಡುವ, ಕನ್ನಡದ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕೊಡಮಾಡುವ ಉದ್ದೇಶದಿಂದ, ಈ ಸಾಂಸ್ಕೃತಿಕ ನೀತಿಯನ್ನು ಬದಲಾದ ಇಂದಿನ ಕಾಲಘಟ್ಟಕ್ಕೆ ಅನುಗುಣವಾಗಿ, ಇಂದಿನ ಎಲ್ಲಾ ಆಧುನಿಕ ಮಾಧ್ಯಮಗಳ ಸಮರ್ಪಕ ಹಾಗೂ ಪರಿಣಾಮಕಾರಿ ಬಳಕೆ ಮಾಡಿಕೊಂಡು ಸಾಂಸ್ಕೃತಿಕ ವಾತಾವರಣ ಕಟ್ಟುವ ನಿಟ್ಟಿನಲ್ಲಿ ಹೊಸದೊಂದು ಸಾಂಸ್ಕೃತಿಕ ನೀತಿಯನ್ನು ಜಾರಿಗೆ ತರುವ ಅವಶ್ಯಕತೆ ಇರುವುದನ್ನು ಮನಗಂಡ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಸಂವಾ 70 ಕಸಧ 2021,**
**ಬೆಂಗಳೂರು, ದಿನಾಂಕ: 16/04/2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಸಾಂಸ್ಕೃತಿಕ ನೀತಿ ರೂಪಿಸಲು ನಾಡಿನ ಖ್ಯಾತ ವಿದ್ವಾಂಸ ಹಾಗೂ ಸಾಂಸ್ಕೃತಿಕ ಚಿಂತಕ ಡಾ:: ಮಲ್ಲೇಪುರಂ ಜಿ. ವೆಂಕಟೇಶ್ ರವರ ಅಧ್ಯಕ್ಷತೆಯಲ್ಲಿ ಈ ಕೆಳಕಾಣಿಸಿದ ಸದಸ್ಯರನ್ನೊಳಗೊಂಡ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಲಾಗಿರುತ್ತದೆ.

| ಕ್ರ.ಸಂ. | ಹೆಸರು | ಪದನಾಮ |
|---|---|---|
| 1 | ಶ್ರೀ ಮಲ್ಲೇಪುರಂ ಜಿ. ವೆಂಕಟೇಶ್, ಬೆಂಗಳೂರು. | ಅಧ್ಯಕ್ಷರು. |
| 2 | ಶ್ರೀ ಸೇತುರಾಮ್, ಬೆಂಗಳೂರು. | ಸದಸ್ಯರು. |
| 3 | ಡಾ|| ಮಾಧವ ಪೆರಾಜೆ, ವಿಜಯ ನಗರ ಜಿಲ್ಲೆ. | ಸದಸ್ಯರು. |
| 4 | ಡಾ|| ಜಯಶ್ರೀ, ಬೆಂಗಳೂರು. | ಸದಸ್ಯರು. |
| 5 | ಡಾ|| ನಾ. ಮೊಗಸಾಲೆ, ಉಡುಪಿ ಜಿಲ್ಲೆ. | ಸದಸ್ಯರು. |

...2

| | | |
|---|---|---|
| 6 | ಶ್ರೀ ಬಿ.ವಿ. ವಸಂತಕುಮಾರ್, ಮೈಸೂರು. | ಸದಸ್ಯರು. |
| 7 | ಶ್ರೀ ಮಹೇಂದ್ರು ಡಿ. ಬೆಂಗಳೂರು. | ಸದಸ್ಯರು. |
| 8 | ಡಾ|| ವಿಶ್ವನಾಥ್, ನವದೆಹಲಿ. | ಸದಸ್ಯರು. |
| 9 | ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. | ಸದಸ್ಯ ಕಾರ್ಯದರ್ಶಿ. |

ಸದರಿ ಸಮಿತಿಯು ಎರಡು ತಿಂಗಳ ಕಾಲಾವಧಿಯಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ.ಆರ್. ರಮೇಶ್ 16/04/2022
**(ಕೆ.ಆರ್. ರಮೇಶ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಸಂಸ್ಕೃತಿ).
16-4-22

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ), (ಇ & ಆರ್.ಎಸ್.ಇ) ಕರ್ನಾಟಕ, ಹೊಸ ಕಟ್ಟಡ "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು (ವ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.
3. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.
4. ಸಂಬಂಧಪಟ್ಟವರಿಗೆ- (ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಇವರ ಮುಖಾಂತರ)
5. ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಸಹಾಯಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ-೩ (೨) (52)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ ಸಮಗ್ರ ಸಾಂಸ್ಕೃತಿಕ ನೀತಿ ರೂಪಿಸುವ ಕುರಿತು ನಿಯಮಾವಳಿಗಳನ್ನು ರಚಿಸಲು 'ಸಾಂಸ್ಕೃತಿಕ ನೀತಿ ನಿರೂಪಣಾ ಸಮಿತಿ' ರಚಿಸುವ ಕುರಿತು

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 393 ಕಸಧ 2012 ದಿ:17.11.2012

2) ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರ ಪತ್ರ ಸಂಖ್ಯೆ: ಕಸನಿ:1:ಸಾಂ.ನೀ:2007-08 ದಿ:19.07.2013

ಪ್ರಸ್ತಾವನೆ:

ರಾಜ್ಯದಲ್ಲಿನ ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಸಮಗ್ರ ಸಾಂಸ್ಕೃತಿಕ ನೀತಿಯನ್ನು ರೂಪಿಸುವ ಕುರಿತು ಪ್ರೊ|| ಬರಗೂರು ರಾಮಚಂದ್ರಪ್ಪ ಇವರ ಅಧ್ಯಕ್ಷತೆಯಲ್ಲಿ ಮೇಲೆ ಓದಲಾದ (1)ರ ಆದೇಶದಲ್ಲಿ 'ಸಾಂಸ್ಕೃತಿಕ ನೀತಿ ನಿರೂಪಣಾ ಸಮಿತಿ'ಯನ್ನು ರಚಿಸಲಾಗಿತ್ತು. ಆದರೆ ಆಡಳಿತಾತ್ಮಕ ಕಾರಣಗಳಿಂದಾಗಿ ಸದರಿ ಸಮಿತಿಯನ್ನು ಪುನರ್ ರಚಿಸುವಂತೆ ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರು ಮೇಲೆ ಓದಲಾದ (2)ರ ಪತ್ರದಲ್ಲಿ ಕೋರಿರುತ್ತಾರೆ.

2] ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 560 ಕಸಧ 2013**
**ಬೆಂಗಳೂರು, ದಿನಾಂಕ: 08-08-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಸಮಗ್ರ ಸಾಂಸ್ಕೃತಿಕ ನೀತಿ ರೂಪಿಸುವ ಕುರಿತು ನಿಯಮಾವಳಿಗಳನ್ನು ರಚಿಸಲು ಕೆಳಕಂಡಂತೆ 'ಸಾಂಸ್ಕೃತಿಕ ನೀತಿ ನಿರೂಪಣಾ ಸಮಿತಿ'ಯನ್ನು ಪುನರ್ ರಚಿಸಲಾಗಿದೆ.

| | |
|---|---|
| 1) ಪ್ರೊ|| ಬರಗೂರು ರಾಮಚಂದ್ರಪ್ಪ | ಅಧ್ಯಕ್ಷರು |
| 2) ಡಾ|| ಗುರುಲಿಂಗ ಕಾಪಸೆ, ಧಾರವಾಡ | ಸದಸ್ಯರು |
| 3) ಶ್ರೀ ಡಿ.ಕೆ.ಚೌಟ, ಮಂಗಳೂರು | ಸದಸ್ಯರು |
| 4) ಡಾ|| ಗೀತಾ ನಾಗಭೂಷಣ್, ಗುಲ್ಬರ್ಗಾ | ಸದಸ್ಯರು |
| 5) ಡಾ|| ಭಾನು ಮುಷ್ತಾಕ್, ಹಾಸನ | ಸದಸ್ಯರು |
| 6) ಶ್ರೀ ಸಿ.ಬಸವಲಿಂಗಯ್ಯ, ಮೈಸೂರು | ಸದಸ್ಯರು |
| 7) ಡಾ|| ಚಂದ್ರಕಾಂತ ಕುಸನೂರ, ಬೆಳಗಾಂ | ಸದಸ್ಯರು |
| 8) ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

.. .. 2]

(51)



ಸದರಿ ಸಮಿತಿಯು ಈ ಆದೇಶ ಹೊರಡಿಸಿದ ಮೂರು ತಿಂಗಳ ಒಳಗಾಗಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಮೇಲಿನ ಸಮಿತಿಯ ಅಧಿಕಾರೇತರ ಸದಸ್ಯರು ನಿಯಮಾನುಸಾರ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ದಿನಾಂಕ 17.11.2012 ಸಂಖ್ಯೆ ಕಸಂವಾಪ್ರ 393 ಕಸಧ 2012ರ ಸರ್ಕಾರಿ ಆದೇಶವನ್ನು ರದ್ದುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿದ್ರಾಮಪ್ಪ ಹ.ತಳವಾರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ

ಪ್ರತಿ:

1) ಮಹಾಲೇಖಪಾಲರು (ಎ&ಇ) ಕರ್ನಾಟಕ ಬೆಂಗಳೂರು
2) ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು
3) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
4) ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ [ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಮುಖಾಂತರ]
5) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಉಪಕಾರ್ಯದರ್ಶಿಗಳ ಆಪ್ತಶಾಖೆ, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ
6) ರಕ್ಷಾ ಕಡತ

(H) 13/8/13

ಹೊರಡಿಸಿದ
ದಿನಾಂಕ.........